**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**

**O.S.No.209/2019**

**ದಿನಾಂಕ 10.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | : | ಎಸ್.ಗಂಗಾಧರಪ್ಪ | CW-1 |
| ತಂದೆಯ ಹೆಸರು | : | ಕೆ.ಎಂ.ಶಂಕರಪ್ಪ | |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ತಾಲ್ಲೂಕು ಭೂ-ಮಾಪಕರು,<br>ಎನ್.ಆರ್.ಪುರ | |
| ವಾಸ | : | ಎನ್.ಆರ್.ಪುರ | |

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ-**

ಕಡೂರಿನ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಆದೇಶದಂತೆ, ನಾನು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸು ನೀಡಿದ್ದು, ನಂತರ ದಿನಾಂಕ 19.08.2023 ರಂದು ಸ್ಥಳಕ್ಕೆ ಭೇಟಿ ನೀಡಿ ಹಾಜರಿದ್ದ ವಾದಿ ಮತ್ತು ಪ್ರತಿವಾದಿಗಳು ಸಮಕ್ಷಮ ಕಡೂರು ತಾಲ್ಲೂಕು, ಕಸಬ ಹೋಬಳಿ, ಮಲ್ಲೇಶ್ವರ ಗ್ರಾಮದ ಸರ್ವೆ ನಂ.127/2 ಎ 1, 127/2 ಎ 6, 127/2 ಎ 5 ರ ಜಮೀನನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಮೂಲ ನಕ್ಷೆಯನ್ನು ಆಧರಿಸಿ ರ್ವೆ ನಂ.127/2 ಎ 1, 127/2 ಎ 6, 127/2 ಎ 5 ರ ಗಡಿರೇಖೆಗಳನ್ನು ಗುರುತಿಸಿ, ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ, ಮಹಜರು ಮಾಡಿ, ಕಛೇರಿಯಲ್ಲಿ ನಕ್ಷೆಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸರ್ವೆ ನಂ.127/2 ಎ 1, 127/2 ಎ 6, 127/2 ಎ 5 ನ್ನು ಅಳತೆ ಮಾಡಿದಾಗ, ಸರ್ವೆ ನಂ.127/2 ಎ 1 ರಲ್ಲಿ ಆಕಾರ್ ಬಂದ್ ನಂತೆ ಮತ್ತು ಪಹಣಿಯಂತೆ 33 ಗುಂಟೆ ಇದ್ದು ಅದರಲ್ಲಿ ಖರಾಬು 1 ಗುಂಟೆ ಇದ್ದು, ಬಾಕಿ 32 ಗುಂಟೆ ಕಳೆದು ಸದರಿ ಜಮೀನು ವಾದಿಯ ಜಮೀನಾಗಿರುತ್ತದೆ. ಸರ್ವೆ ನಂ.127/2 ಎ 6 ರಲ್ಲಿ ಆಕಾರ್ ಬಂದ್ ನಂತೆ ಮತ್ತು ಪಹಣಿಯಂತೆ 34 ಗುಂಟೆ ಇದ್ದು ಅದರಲ್ಲಿ ಖರಾಬು 4 ಗುಂಟೆ ಕಳೆದು ಬಾಕಿ 30 ಗುಂಟೆ ಇದ್ದು, ಸದರಿ ಜಮೀನು ವಾದಿಯ ಜಮೀನಾಗಿರುತ್ತದೆ. ಸರ್ವೆ

ನಂ.127/2 ಎ 5 ರಲ್ಲಿ ಆಕಾರ್ ಬಂದ್ ನಂತೆ ಮತ್ತು ಪಹಣಿಯಂತೆ 1 ಎಕರೆ 17 ಗುಂಟೆ ಇದ್ದು ಸದರಿ ಜಮೀನು ಪ್ರತಿವಾದಿಗಳ ಜಮೀನಾಗಿರುತ್ತದೆ.

ಪ್ರತಿವಾದಿಗಳಿಗೆ ಸೇರಿದ ಸರ್ವೆ ನಂ.127/2 ಎ 5 ರಲ್ಲಿ ಅರ್ಧ ಗುಂಟೆ ಪ್ರದೇಶವನ್ನು ಸರ್ವೆ ನಂ.127/2 ಎ 1 ರ ಮಾಲೀಕರಾದ ವಾದಿಯು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ.

ವಾದಿಗೆ ಸೇರಿದ ಸರ್ವೆ ನಂ.127/2 ಎ 1 ರಲ್ಲಿ ಅರ್ಧ ಗುಂಟೆ ಪ್ರದೇಶವನ್ನು ಸರ್ವೆ ನಂ.127/2 ಎ 5 ರ ಮಾಲೀಕರಾದ ಪ್ರತಿವಾದಿಗಳು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ.

ಪ್ರತಿವಾದಿಗಳಿಗೆ ಸೇರಿದ ಸರ್ವೆ ನಂ.127/2 ಎ 5 ರ 5 ಗುಂಟೆ ಪ್ರದೇಶವನ್ನು ಸರ್ವೆ ನಂ.127/2 ಎ 6 ರ ಮಾಲೀಕರಾದ ವಾದಿಯು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ ಎಂದು ನಾನು ನನ್ನ ಅಳತೆ ಕಾರ್ಯದಲ್ಲಿ ಕಂಡುಬಂದಿದ್ದು, ಸದರಿ ವಿಚಾರಗಳನ್ನು ನನ್ನ ನಕ್ಷೆಯಲ್ಲಿ ವಿವರಿಸಿರುತ್ತೇನೆ.

ಸಾಕ್ಷಿಯು ಉಭಯ ಪಕ್ಷಗಾರರಿಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.1 ಎ ಎಂದು, 07 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.2 ಎಂದು, ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ.3 ಎ ಎಂದು, ವಾದಿ ಮತ್ತು ಪ್ರತಿವಾದಿಗಳ ಪ್ರಶ್ನಾವಳಿಗಳಿಗೆ ನೀಡಿದ ಉತ್ತರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಮತ್ತು 5 ಎಂದು, ಕಛೇರಿಯಲ್ಲಿ ತಯಾರಿಸಿದ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ವಿ.ಎಸ್. ವಕೀಲರಿಂದಃ-</u>**

ಸರ್ವೆ ನಂ.127/2 ಎ 1 ರಲ್ಲಿ 33 ಗುಂಟೆ ಜಮೀನು ಇದ್ದು 1 ಗುಂಟೆ ಖರಾಬು ಕಳೆದು 32 ಗುಂಟೆ ಜಮೀನು ಇರುತ್ತದೆ ಎಂದು ನಾನು ತಿಳಿಸಿದ್ದು, ಸದರಿ ಅಳತೆಯು ಪಹಣಿ ಮತ್ತು ಆಕಾರ್ ಬಂದ್ ನಲ್ಲಿಯೂ ನಮೂದು ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.127/2 ಎ 6 34 ಗುಂಟೆ ಜಮೀನು ಇದ್ದು 4 ಗುಂಟೆ ಖರಾಬು ಕಳೆದು 30 ಗುಂಟೆ ಜಮೀನು ಇರುತ್ತದೆ ಎಂದು ನಾನು ತಿಳಿಸಿದ್ದು, ಸದರಿ ಅಳತೆಯು ಪಹಣಿ ಮತ್ತು ಆಕಾರ್ ಬಂದ್ ನಲ್ಲಿಯೂ ನಮೂದು ಇರುತ್ತದೆ ಎಂದರೆ ಸರಿ.

ಸರ್ವೆ ನಂ.127/2 ಎ 1 ರಲ್ಲಿರುವ ಖರಾಬು ಸೇರಿ 33 ಗುಂಟೆ ಹಾಗೂ ಸರ್ವೆ ನಂ.127/2 ಎ 6 ರಲ್ಲಿ ಖರಾಬು ಸೇರಿ 34 ಗುಂಟೆಯು ವಾದಿಯ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಎರಡೂ ಸರ್ವೆ ನಂಬರುಗಳ ಜಮೀನುಗಳನ್ನು ವಾದಿಯು ತಂತಿಬೇಲಿಗಳಿಂದ ಸಂರಕ್ಷಿಸಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ.127 ರ ದಕ್ಷಿಣಕ್ಕೆ ಸರ್ವೆ ನಂ.127/2 ಸಿ ಜಮೀನು ಬರುತ್ತದೆ. ನಾನು ಅಳತೆಗಾಗಿ ಹೋದಾಗ ಮೂಲ ಸರ್ವೆ ನಕ್ಷೆಯನ್ನು ತೆಗೆದುಕೊಂಡು ಹೋಗಿರುತ್ತೇನೆ. ಸರ್ವೆ ನಂ.127 ರ ಪೂರ್ಣ ಜಮೀನನ್ನು ಅಳತೆ ಮಾಡಿ ಬಂದ್ ಕಲ್ಲನ್ನು ಗುರುತಿಸಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.127 ಮತ್ತು ಸರ್ವೆ ನಂ.13 ರ ಪಶ್ಚಿಮದಲ್ಲಿರುವ ಬಂದ್ ಕಲ್ಲನ್ನು ಗುರುತಿಸಿಕೊಂಡು ಸರ್ವೆ ನಂ.127/2 ಎ 1, ಸರ್ವೆ ನಂ.127/2 ಎ 5, ಸರ್ವೆ ನಂ.127/2 ಎ 6 ರ ಜಮೀನಿನ ಬಂದ್ ಕಲ್ಲನ್ನು ಗುರುತಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ, ಸರ್ವೆ ನಂ.127/2 ಎ 3, ಸರ್ವೆ ನಂ.127/2 ಎ 4, ಸರ್ವೆ ನಂ.127/2 ಎ 2 ರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನೂ ಸಹ ನಾನು ನಕ್ಷೆಯಂತೆ ಅಳತೆ ಮಾಡಿರುತ್ತೇನೆ. ಸದರಿ ಜಮೀನುಗಳಲ್ಲಿ ಒತ್ತುವರಿಯಾಗಿರುವುದಿಲ್ಲ.

ಸರ್ವೆ ನಂ.127 ರ ಪೂರ್ವಕ್ಕೆ ರಸ್ತೆ ಬರುತ್ತದೆ. ಸರ್ವೆ ನಂ.127 ರಲ್ಲಿರುವ ಸ್ವಲ್ಪ ಕೃಷಿ ಭೂಮಿ ಪೂರ್ವದಿಕ್ಕಿನಲ್ಲಿರುವ ರಸ್ತೆಗೆ ಹೋಗಿರುತ್ತದೆ ಎಂದರೆ ಸರಿ. ಎಷ್ಟು ಗುಂಟೆ ಪ್ರದೇಶ ರಸ್ತೆಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.127 ರಲ್ಲಿ ಸರ್ವೆ ನಂ.127/2 ಎ 1, ಸರ್ವೆ ನಂ.127/2 ಎ 6 ಮತ್ತು ಸರ್ವೆ ನಂ.127/2 ಎ 5 ರಲ್ಲಿ ಸ್ವಲ್ಪ ಭಾಗ ಜಮೀನು ಪೂರ್ವದ ರಸ್ತೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.127/2 ಬಿ ರಲ್ಲಿರುವ ಜಮೀನು ರಸ್ತೆಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ.

ವಾದಿಯ ಬಳಿ ಇರುವ ಸರ್ವೆ ನಂ.127/2 ಎ 1, ಸರ್ವೆ ನಂ.127/2 ಎ 6 ರ ಎರಡೂ ಜಮೀನುಗಳಿಂದ 5 ಗುಂಟೆ ಖರಾಬು ಹೋಗಿರುತ್ತದೆ ಎಂದರೆ ಸರಿ. ವಾದಿಯ ಕುಟುಂಬದಲ್ಲಿ ಸದರಿ ಖರಾಬು 5 ಗುಂಟೆಯನ್ನು ಕಳೆದು ಉಳಿದ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ, ಸಾಕ್ಷಿಯು ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.127/2 ಎ 5 ರಲ್ಲಿರುವ ಜಮೀನಿನಲ್ಲಿ ಯಾವುದೇ ಖರಾಬು ಇರುವುದಿಲ್ಲ. ನನ್ನ ಪ್ರಕಾರ ಸರ್ವೆ ನಂ.127/2 ಎ 1 ರಲ್ಲಿ ಪ್ರತಿವಾದಿಗಳು ಅರ್ಧ ಗುಂಟೆ ಜಮೀನನ್ನು ಒತ್ತುವರಿ

ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ನಾನು ನಿಪಿ.6 ರ ನಕ್ಷೆಯಲ್ಲಿ ನಮೂದಿಸಿರುವಂತೆ ವಾದಿಯ ಬಳಿ ಇರುವ ಸರ್ವೆ ನಂ.127/2 ಎ 1, ಸರ್ವೆ ನಂ.127/2 ಎ 6 ರಲ್ಲಿರುವ ಜಮೀನಿನಲ್ಲಿ 5 ಗುಂಟೆ ಖರಾಬು ಕಳೆದು ವಾದಿಯ ಬಳಿ ಈಗ ಇರುವ ಜಮೀನಿನ ಸಾಗುವಿಸ್ತೀರ್ಣ ನೋಡಿದರೆ ಪಹಣಿಯಂತೆ ತಾಳೆ ಇರುತ್ತದೆ ಎಂದರೆ ಸರಿ. ವಾದಿಯ ಬಳಿ ಇರುವ ಸರ್ವೆ ನಂ.127/2 ಎ 1, ಸರ್ವೆ ನಂ.127/2 ಎ 6 ರಲ್ಲಿರುವ ಜಮೀನಿನಲ್ಲಿ 5 ಗುಂಟೆ ಖರಾಬು ಕಳೆದು ಸರ್ವೆ ನಂ.127/2 ಎ 1 ರಲ್ಲಿ 32 ಗುಂಟೆ ಉಳಿದಿದ್ದು ಅದೇ ರೀತಿ ಸರ್ವೆ ನಂ.127/2 ಎ 6 ರಲ್ಲಿ ಖರಾಬು 30 ಗುಂಟೆ ವಾದಿಯು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೆ ನಂ.127/2 ಎ 1 ರಲ್ಲಿರುವುದು 1 ಗುಂಟೆ 'ಆ' ಖರಾಬು, ಸರ್ವೆ ನಂ.127/2 ಎ 6 ರಲ್ಲಿರುವ 4 ಗುಂಟೆ 'ಬಿ' ಖರಾಬು ಆಗಿರುತ್ತದೆ. 'ಬಿ' ಖರಾಬು ಎಂದರೆ ಸಾರ್ವಜನಿಕರ ಉದ್ದೇಶಕ್ಕಾಗಿ ಬಿಟ್ಟಿರುವ ಶಾಶ್ವತ ಖರಾಬು ಜಮೀನಾಗಿರುತ್ತದೆ,

ಸರ್ವೆ ನಂ.127/2 ಎ 6 ರಲ್ಲಿ ಒಂದು ಬಂಡಿದಾರಿ ಹೋಗಿರುತ್ತದೆ ಎಂದರೆ ಸರಿ. ಸದರಿ ಬಂಡಿದಾರಿಯನ್ನೇ ಸರ್ವೆ ನಂ.127/2 ಎ 6 ರಲ್ಲಿ 'ಬಿ' ಖರಾಬು ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಎರಡೂ ಖರಾಬುಗಳನ್ನು ಕಳೆದರೆ ವಾದಿಯ ಹತ್ತಿರ ಪಹಣಿಯಂತೆ ಅವರ ಸ್ವಾಧೀನಾನುಭವದಲ್ಲಿ ಜಮೀನು ಇರುತ್ತವೆ ಎಂದರೆ ಸರಿ. ಸರ್ವೆ ನಂ.127/2 ಎ 1 ಮತ್ತು ಸರ್ವೆ ನಂ.127/2 ಎ 6 ರಲ್ಲಿರುವ ಖರಾಬು ಪ್ರದೇಶಗಳನ್ನು ಕಳೆದರೆ ಸರ್ವೆ ನಂ.127/2 ಎ 5 ರ ಒತ್ತುವರಿ ಪ್ರದೇಶ ಕಂಡುಬರುವುದಿಲ್ಲ ಎಂದರೆ ಸರಿ. ಸರ್ವೆ ನಂ.127/2 ಎ 5 ರಲ್ಲಿ ಪಹಣಿಯಂತೆ ಒಟ್ಟು 1 ಎಕರೆ 17 ಗುಂಟೆ ಇದ್ದು, ನಾನು ಅಳತೆ ಮಾಡಿದಾಗ ಸದರಿ ಸರ್ವೆ ನಂಬರಿನಲ್ಲಿ 1 ಎಕರೆ 12 ಗುಂಟೆ ಪ್ರದೇಶದಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುವುದು ಕಂಡುಬಂದಿರುತ್ತದೆ. ಅಂದರೆ 5 ಗುಂಟೆ ಪ್ರದೇಶವನ್ನು ವಾದಿಯು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಒತ್ತುವರಿಯಾಗಿರುವ 5 ಗುಂಟೆ ಜಮೀನು ಹೈನು ಜಮೀನು (ವ್ಯವಸಾಯಕ್ಕೆ ಯೋಗ್ಯವಾದ ಜಮೀನು) ಆಗಿರುತ್ತದೆ.

ಸರ್ವೆ ನಂ.127/2 ಎ 6 ರಲ್ಲಿ ವಾದಿಯು ಖರಾಬು ಸೇರಿ 39 ಗುಂಟೆ ಸ್ವಾಧೀನದಲ್ಲಿ ಇರುತ್ತಾರೆ. ಅಂದರೆ 4 ಗುಂಟೆ ಖರಾಬು ಕಳೆದರೆ ವಾದಿಯು ಸಾಗುಜಮೀನು 35 ಗುಂಟೆಯಲ್ಲಿ ಸ್ವಾಧೀನದಲ್ಲಿರುವುದು ಕಂಡುಬಂದಿರುತ್ತದೆ. ಒತ್ತುವರಿಯಾಗಿರುವ 5 ಗುಂಟೆ ಜಮೀನು ವಾದಿಯ ಜಮೀನಿನ ಉತ್ತರಕ್ಕೆ ಅಂದರೆ

ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗಕ್ಕೆ ಬರುತ್ತದೆ.

ವಾದಿಯು ಸರ್ವೆ ನಂ.127/2ಎ6ರಲ್ಲಿ ಒಟ್ಟು 39ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುವ ಬಗ್ಗೆ ನನ್ನ ನಕ್ಷೆಯಲ್ಲಾಗಲಿ ಅಥವಾ ನನ್ನ ವರದಿಯಲ್ಲಾಗಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ವಾದಿಯ ಬಳಿ ಸರ್ವೆ ನಂ.127/2ಎ6ರಲ್ಲಿ 4 ಗುಂಟೆ ಖರಾಬು ಇದೆ ಎಂದು ಹಾಗೂ ಪ್ರತಿವಾದಿಗಳ ಬಳಿ ಇರುವ ಸರ್ವೆ ನಂ.127/2ಎ5ರಲ್ಲಿ 5 ಗುಂಟೆ ಜಮೀನು ಕಡಿಮೆ ಇದೆ ಎಂದು ತಿಳಿದುಕೊಂಡು ಸದರಿ 5 ಗುಂಟೆ ಜಮೀನು ವಾದಿಯ ಬಳಿ ಇರುತ್ತದೆ ಎಂದು ಇನ್ನೂ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಕ್ಷೆಯಂತೆ ಗುರುತಿಸಿ ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ವಾದಿಯ ಜಮೀನಿನಲ್ಲಿ ಸರ್ವೆ ನಂ.127/2ಎ1 ರಲ್ಲಿ 1 ಗುಂಟೆ ಖರಾಬು, ಸರ್ವೆ ನಂ.127/2ಎ6ರಲ್ಲಿ 4 ಗುಂಟೆ ಖರಾಬು ಒಟ್ಟು 5 ಗುಂಟೆ ಖರಾಬು ಜಮೀನನ್ನು ಕಳೆದು ಯಾವುದೇ ಒತ್ತುವರಿಯನ್ನು ಮಾಡದೆ ವಾದಿಯು ಪಹಣಿಯಂತೆ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಜಮೀನನ್ನು ಮಾರಾಟ ಮಾಡಿರುವ ಬಾಬ್ತು ನಾನು ಅಳತೆ ಕಾರ್ಯಕ್ಕೆ ಹೋದಾಗ ನನಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಕ್ರಯಕ್ಕೆ ಪಡೆದ ವ್ಯಕ್ತಿಗಳು ಎಷ್ಟೆಷ್ಟು ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಯಾವುದೇ ಜಮೀನನ್ನು ಒತ್ತುವರಿ ಮಾಡದೇ ಇದ್ದರೂ ಸಹ ಪ್ರತಿವಾದಿಗಳ ಮಾತು ಕೇಳಿ ಪ್ರತಿವಾದಿಗಳಿಗೆ ಸಹಾಯವಾಗಲಿ ಎಂದು ಸುಳ್ಳು ವರದಿ ಮತ್ತು ನಕ್ಷೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು, ಕಡೂರು.